ಆ) ಇಲ್ಲ.

ಇ) ಕೆಲವು ದೂರುಗಳು ಬಂದಿದ್ದು, ಅವು ಪರಿಶೀಲನೆಯಲ್ಲಿವೆ

ಈ) ಪರಿಶೀಲನಾ ವರದಿ ಬಂದನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಉ) ಹೌದು.

ಊ) ಯೋಜನೆಯಲ್ಲಿ ಸಾಕಷ್ಟು ಹಣ ಒದಗಿ ಬಂದಲ್ಲಿ ಹೊಸದಾಗಿ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಕುಂದಾಪುರ ಕ್ಷೇತ್ರದ ಆನೋಡು, ನಂದಿಕೇಶ್ವರ ದೇವಾಲಯಕ್ಕೆ ಹೋಗುವ ದಾರಿ ಮಧ್ಯೆ ಹೊಳೆಗೆ ಕಾಲು ಸಂಕ ರಚನೆ ಕುರಿತು.

೭೫೫. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಲೋಕೋಪಯೋಗಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಂದಾಪುರ ಕ್ಷೇತ್ರವ ಆನೋಡು ಗ್ರಾಮದ ನಂದಿಕೇಶ್ವರ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿರುವ ಹೊಳೆಗೆ ಕಾಲು ದಾರಿ ರಚಿಸುವ ಯೋಜನೆ ಸರಕಾರದವರ ಗಮನಕ್ಕೆ ಬಂದಿದೆಯೇ, ಹಾಗೂ ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ, ಕಾಲು ಸಂಕದ ಅಂದಾಜು ಸುಮಾರು ೧,೫೦ ಲಕ್ಷ ರೂಪಾಯಿಗಳು.

ಕುಂದಾಪುರ ಕ್ಷೇತ್ರದ ಬಸ್ರೂರು ಗ್ರಾಮದ ಹಟ್ಟಿ ಕುದ್ರುವಿಗೆ ಆಗುವ ನದಿ ಕೊರೆತಕ್ಕೆ ರಕ್ಷಣೆ ಒದಗಿಸುವ ಬಗ್ಗೆ

೭೫೬. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಲೋಕೋಪಯೋಗಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಂದಾಪುರ ತಾಲ್ಲೂಕಿನ ಬಸ್ರೂರು ಗ್ರಾಮದ ಹಟ್ಟಿ ಕುದ್ರುವಿಗೆ ೪ ದಿಕ್ಕುಗಳಿಂದ ಉಂಟಾಗುವ ನದಿ ಕೊರೆತದ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಇದಕ್ಕೆ ರಕ್ಷಣೆ ಒದಗಿಸುವ ಯೋಜನೆ ಸರ್ಕಾರದವರ ಮುಂದಿದೆಯೇ ಹಾಗೂ ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು

ಆ) ೫ ಲಕ್ಷ ರೂಪಾಯಿಗಳ ಅಂದಾಜು ಸರ್ಕಾರದ ಪರಿಶೀಲನೆಯಲ್ಲಿದೆ.

ಭದ್ರಾ ಅಚ್ಚುಕಟ್ಟು ಪ್ರಾಧಿಕಾರಕ್ಕೆ ಮಾಡಲಾದ ವೆಚ್ಚ.

೭೬೬. ಶ್ರೀ ಡಿ. ಜಿ. ಬಸವನ ಗೌಡ (ಹೊನ್ನಾಳಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫-೮೬ ರಲ್ಲಿ ಭದ್ರಾ ಅಚ್ಚುಕಟ್ಟು ಪ್ರಾಧಿಕಾರಕ್ಕೆ ಸರ್ಕಾರದವರು ಒದಗಿಸಿದ ಮೊಬಲಗೆಷ್ಟು ?

ಆ) ೧೯೮೫-೮೭ನೇ ವರ್ಷಕ್ಕಾದರೂ ಹೆಚ್ಚಿನ ಮೊಬಲಗಳನ್ನು ಕಾದಿರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ರೂ. ೩೦.೦೦ ಲಕ್ಷ.

ಆ) ಪರಿಶೀಲಿಸುತ್ತೇವೆ.